**<u>ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ನಿಯಮ-72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ</u>**

ವಿಷಯ: **ಬೆಂಗಳೂರಿನ ಹುಳಿಮಾವು ಆರಕ್ಷಕ ಠಾಣಾ ವ್ಯಾಪ್ತಿಯಲ್ಲಿನ 2020-21 ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇನ್ಸ್‌ಪೆಕ್ಟರ್‌ರವರು ಭೂಗಳ್ಳರ ಜೊತೆ ಶಾಮೀಲಾಗಿ ಹಲವಾರು ಸರ್ಕಾರಿ ಸ್ವತ್ತುಗಳಿಗೆ ಅನಧಿಕೃತವಾಗಿ ಬೇಲಿ ಹಾಕಿಸಿರುವ ಸಂಬಂಧ ಪೊಲೀಸ್ ದೂರುಗಳ ಪ್ರಾಧಿಕಾರದಲ್ಲಿ ದೂರುಗಳು ದಾಖಲಾಗಿದ್ದು, ಭೂಗಳ್ಳರ ಪರವಾಗಿ ಕಾರ್ಯ ನಿರ್ವಹಿಸುತ್ತಿರುವ ಇವರು ಸದನಕ್ಕೆ ತಪ್ಪು ಮಾಹಿತಿ ನೀಡಿರುವ ಸಂಬಂಧ ಹಕ್ಕುಚ್ಯುತಿಯಾಗಿದ್ದು, ಹಲವಾರು ಪಿರ್ಯಾದುದಾರರು ಭೂಗಳ್ಳರ ವಿರುದ್ಧ ದೂರುಗಳನ್ನು ನೀಡಿದ್ದರೂ ಎಫ್.ಐ.ಆರ್ ದಾಖಲು ಮಾಡದೇ ಎನ್.ಸಿ.ಆರ್ ಮಾಡಿದ್ದು, ಈ ಅಧಿಕಾರಿಯ ಮೇಲೆ ಅನೇಕ ದೂರುಗಳು ದಾಖಲಾಗಿದ್ದರೂ, ಇವರನ್ನು ಅದೇ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿಯೇ ಸ್ಥಳ ನಿಯುಕ್ತಿಗೊಳಿಸಲಾಗಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವ ಗಂಭೀರ ಸಮಸ್ಯೆಯ ಕುರಿತು.**

ಉತ್ತರ:- ಬೆಂಗಳೂರಿನ ಹುಳಿಮಾವು ಆರಕ್ಷಕ ಠಾಣಾ ವ್ಯಾಪ್ತಿಯಲ್ಲಿನ 2020-21 ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇನ್ಸ್‌ಪೆಕ್ಟರ್‌ರವರು ಶ್ರೀ ಮಹೇಶ್ ಕನಕಗಿರಿ ರವರು ಭೂಗಳ್ಳರ ಜೊತೆ ಶಾಮೀಲಾಗಿ ಹಲವಾರು ಸರ್ಕಾರಿ ಸ್ವತ್ತುಗಳಿಗೆ ಅನಧಿಕೃತವಾಗಿ ಬೇಲಿ ಹಾಕಿಸಿರುವ ವಿಚಾರವಾಗಿ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ.

ಆದರೆ, ಸದರಿ ಪೊಲೀಸ್ ಇನ್ಸ್‌ಪೆಕ್ಟರ್ ರವರು ಸದನಕ್ಕೆ ತಪ್ಪು ಮಾಹಿತಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಇವರ ವಿರುದ್ಧ ಡಿಸಿಪಿ ಆಗ್ನೇಯ ವಿಭಾಗ ರವರು ಕೆ.ಎಸ್.ಪಿ (ಡಿ.ಪಿ) ನಿಯಮ-7ರ ಪ್ರಕಾರ ದಿನಾಂಕ: 31.10.2023 ರಂದು ಶಿಸ್ತು ಕ್ರಮವನ್ನು ಜರುಗಿಸಿರುತ್ತಾರೆ.

ಪೊಲೀಸ್ ಠಾಣೆಯಲ್ಲಿ ಯಾವುದೇ ಪಿರ್ಯಾದುದಾರರು ಭೂಗಳ್ಳರ ವಿರುದ್ಧವಾಗಲೀ ಅಥವಾ ಇತರೆ ಯಾವುದೇ ವ್ಯಕ್ತಿಗಳ ವಿರುದ್ಧವಾಗಲೀ ದೂರು ನೀಡಿದ್ದಲ್ಲಿ ದೂರನ್ನು ಸ್ವೀಕರಿಸಿ ಸದರಿ ದೂರು ಘೋರ ಸ್ವರೂಪದ ಸಂಜ್ಞೇಯ ಅಪರಾಧವಾಗಿದ್ದಲ್ಲಿ ಕೂಡಲೇ ಎಫ್.ಐ.ಆರ್‌ನ್ನು ದಾಖಲಿಸಿ ತನಿಖೆ ಕೈಗೊಳ್ಳಲಾಗುತ್ತದೆ ಹಾಗೂ ದೂರುಗಳು ಅಸಂಜ್ಞೇಯ ಸ್ವರೂಪದ್ದಾಗಿದ್ದಲ್ಲಿ ಎನ್.ಸಿ.ಆರ್ ಪ್ರಕರಣಗಳನ್ನು ದಾಖಲಿಸಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತದೆ.

ಇನ್ಸ್‌ಪೆಕ್ಟರ್ ಶ್ರೀ ಮಹೇಶ್ ಕನಕಗಿರಿ ರವರು ಈ ಹಿಂದೆ ಕರ್ತವ್ಯ ನಿರ್ಲಕ್ಷತೆ ಮತ್ತು ಅಶಿಸ್ತು ಎಸಗಿರುವ ಆರೋಪಗಳಿಗಾಗಿ ಇವರ ವಿರುದ್ಧ ಒಟ್ಟು 13 ಬಾರಿ ಕೆ.ಎಸ್.ಪಿ (ಡಿ.ಪಿ) ನಿಯಮ-7ರ ಪ್ರಕಾರ ಶಿಸ್ತು ಕ್ರಮವನ್ನು ಜರುಗಿಸಲಾಗಿದೆ ಹಾಗೂ 01 ಬಾರಿ ಅಮಾನತ್ತುಗೊಳಿಸಿ ಆದೇಶಿಸಲಾಗಿರುತ್ತದೆ. ಉಳಿದಂತೆ ಈ ಅಧಿಕಾರಿಯ ವಿರುದ್ಧ ಇತರೆ ಪ್ರಕರಣಗಳು ದಾಖಲಾಗಿರುವುದಿಲ್ಲ.

ಪೊಲೀಸ್ ಇನ್ಸ್‌ಪೆಕ್ಟರ್ ಮಹೇಶ್ ಕನಕಗಿರಿ ರವರನ್ನು ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಕರ್ನಾಟಕ ರಾಜ್ಯ, ಬೆಂಗಳೂರು ರವರ ಕಛೇರಿ ಆದೇಶ ಸಂಖ್ಯೆ: ಹೆಚ್.ಆರ್.ಎಂ-1(2)/05/2022-23, ಓ.ಬಿ.ಸಂ :581/2023, ದಿನಾಂಕ:03-10-2023 ರೀತ್ಯಾ ಬಂಡೇಪಾಳ್ಯ ಪೊಲೀಸ್ ಠಾಣೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿರುತ್ತದೆ.

**ಸಂಖ್ಯೆ: ಹೆಚ್‌ಡಿ 325 ಪಿಇಎಂ 2023**

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು